**ದಿನಾಂಕ : 22.11.2022, (ಮಂಗಳವಾರ) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅದ್ಯಕ್ಷತೆಯಲ್ಲಿ ನಡೆದ ರಾಜ್ಯದ ಮೂರನೇ ಬ್ರಾಡ್ ಬ್ಯಾಂಡ್ ಸಮಿತಿ ಸಭೆಯ ನಡುವಳಿಗಳು**

ಸಭೆಯಲ್ಲಿ ಹಾಜರಿದ್ದವರು: (ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ).

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಸಭೆಗೆ ಮಂಡನೆಯಾದ ವಿಷಯಗಳ ಮೇಲೆ ಚರ್ಚೆ ನಡೆಸಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| Sl. No | ವಿಷಯ | ನಿರ್ಣಯಗಳು | ಕ್ರಮ |
|---|---|---|---|
| 1 | ಎರಡನೇ SBC ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಅನುಷ್ಠಾನ ಕುರಿತು ಚರ್ಚೆ. | • ಎರಡನೇ ಎಸ್ ಬಿ ಸಿ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಐದು ತಿಂಗಳಾದರೂ ಅನುಷ್ಠಾನಗೊಳಿಸದೆ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಇಲಾಖೆಗಳ ಮುಖ್ಯಸ್ಥರು ವೈಯ್ಯಕ್ತಿಕ ಆಸಕ್ತಿವಹಿಸಿ ಆ ಎಲ್ಲ ತೀರ್ಮಾನಗಳ ಅನುಷ್ಠಾನವನ್ನು ಕೂಡಲೇ ಮಾಡುವಂತೆ ಸೂಚಿಸಲಾಯಿತು. | • ಸಂಬಂಧಿತ ಇಲಾಖೆಗಳ ಮುಖ್ಯಸ್ಥರು |

| | | | |
|---|---|---|---|
| 2 | ರೈಟ್ ಆಫ್ ವೇ ಗಾಗಿ (ROW) ಅನುಮತಿ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಪ್ರಗತಿ ಪರಿಶೀಲನೆ | • ನಗರಾಭಿವೃದ್ಧಿ ಇಲಾಖೆಯ 122 ಪ್ರಕರಣಗಳು, ಗ್ರಾಮೀಣಾಭಿವೃದ್ಧಿ ಇಲಾಖೆಯ 3,789 ಪ್ರಕರಣಗಳು, ಹಾಗು ಬಿಬಿಎಂಪಿಯ 22 ಪ್ರಕರಣಗಳು, ಪಿಎಂ ಗತಿಶಕ್ತಿ ಪೋರ್ಟಲ್‌ನಲ್ಲಿ ಇತ್ಯರ್ಥವಾಗದೆ ಬಹಳ ಸಮಯದಿಂದ ಬಾಕಿ ಉಳಿದಿವೆ. ಅವುಗಳನ್ನು ಕೂಡಲೇ ಇತ್ಯರ್ಥಪಡಿಸುವುದು. ಹಾಗೆಯೇ ಬಿಬಿಎಂಪಿ ಆಫ್ ಲೈನ್ ನಲ್ಲಿ 410 OFC ಮತ್ತು 70 ಟವರ್ ಪ್ರಕಣಗಳು ಮತ್ತು ಡಿಎಮ್‌ಎ ವ್ಯಾಪ್ತಿಯಲ್ಲಿ (UDD) 77 OFC, ಮತ್ತು 47 ಟವರ್ ಪ್ರಕಣಗಳು, ಹಾಗು ಅರಣ್ಯ ಇಲಾಖೆಯಲ್ಲಿ 25 ಪ್ರಕಣಗಳು 2 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿ ಉಳಿದಿವೆ. ಅವುಗಳ ಇತ್ಯರ್ಥಕ್ಕೂ ಕ್ರಮ ವಹಿಸಲು ಸೂಚಿಸಲಾಯಿತು.<br><br>• RoW ಸಿಂಗಲ್ ವಿಂಡೋ ಆನ್ ಲೈನ್ ಪೋರ್ಟಲ್ ಪೂರ್ಣ ರೂಪದಲ್ಲಿ ಇನ್ನು ಸಿದ್ದವಾಗದೆ ಇರುವ ಕಾರಣ e-Governance. ಇಲಾಖೆ ಕಾರ್ಯದರ್ಶಿಗಳು ಸಂಬಂಧಪಟ್ಟವರ ಜೊತೆ ಸಭೆ ನಡೆಸಿ ಪೋರ್ಟಲ್ ಅನ್ನು ಪೂರ್ಣ ರೂಪದಲ್ಲಿ ಸಜ್ಜುಗೊಳಿಸುವುದು. ಹಾಗೆಯೇ 5G ಸೇವೆಯ ಬಳಕೆಗೂ ಈಗ ಕ್ರಮ ಆಗುತ್ತಿರುವುದರಿಂದ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುಂತೆ ಸಾರ್ವಜನಿಕ ಸ್ವತ್ತುಗಳ (Street Furniture) ಬಳಕೆ ಸೇರಿದಂತೆ RoW ಅರ್ಜಿಗಳ ಇತ್ಯರ್ಥಕ್ಕೆ | • ACS, ಮತ್ತು ಕಾರ್ಯದರ್ಶಿ UDD, ಮುಖ್ಯ ಆಯುಕ್ತರು BBMP ಮತ್ತು DMA.<br>• RDPR ಇಲಾಖೆಯ ACS ಮತ್ತು ಪಂಚಾಯತ್ ರಾಜ್ ಆಯುಕ್ತರು ಹಾಗು ಅರಣ್ಯ ಇಲಾಖೆಯ ACS ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (PCCF) ಗಳು<br>• ಕಾರ್ಯದರ್ಶಿ e-Governance.<br><br>• ACS ನಗರಾಭಿವೃಧ್ಧಿ ಮತ್ತು RDPR ಇಲಾಖೆಗಳು. |

| | | | |
|---|---|---|---|
| | | ರಾಜ್ಯಕ್ಕೆ ಒಂದೇ ಪೋರ್ಟಲ್ ಅನ್ನು ಮಾಡುವ ಬಗ್ಗೆ ಕ್ರಮವಹಿಸುವುದು.<br>• ಅಸ್ತಿತ್ವದಲ್ಲಿರುವ ಟೆಲಿಗ್ರಾಫ್ ಟವರ್, RoW ಅರ್ಜಿಗಳ ನೋಂದಣಿಗೆ ನಿಗದಿಯಾದ ಅವಧಿಯನ್ನು ಇನ್ನು 6 ತಿಂಗಳು ವಿಸ್ತರಿಸುವ ಬಗ್ಗೆ ಕೂಡಲೇ ಅಧಿಸೂಚನೆ ಹೊರಡಿಸುವುದು.<br>• ಡೀಮ್ಡ್ ಅಪ್ರೂವಲ್ ಮತ್ತು ಅರ್ಜಿ ತಿರಸ್ಕಾರಕ್ಕೆ ಕಾರಣ ನಮೂದಿಸಲು ಪೋರ್ಟಲ್ ನಲ್ಲಿ ಅವಕಾಶ ಮಾಡಿಸುವುದು.<br>• ನಗರಾಭಿವೃದ್ಧಿ ಇಲಾಖೆ ಪೋರ್ಟಲ್ನಲ್ಲಿ ಇ-ಖಾತಾ (ನಮುನೆ-3)/PID ಧಾಖಲೆ ಒದಗಿಸಲೇಬೇಕೆಂಬ ಷರತ್ತನ್ನು ತೆಗೆದು ಹಾಕಿ RoW ನೀತಿಯಲ್ಲಿ ಇರುವ ದಾಖಲೆಗಳನ್ನಷ್ಟೇ ಪಡೆಯುವುದು.<br>• ಇಲಾಖೆಗಳು ಕೇಬಲ್ ಕತ್ತರಿಸುವ ಮುನ್ನ ಏಜೆನ್ಸಿಗೆ ಮಾಹಿತಿ ನೀಡುವುದನ್ನು ಕಡ್ಡಾಯಗೊಳಿಸುವುದು.<br>• RDPR ನಲ್ಲಿ 3373 ಪ್ರಕಣಗಳು ಹಿಂದಿನ ಹಲವು ತಿಂಗಳುಗಳಿಂದ ಬಾಕಿ ಉಳಿದಿವೆ.ರಾಷ್ಟ್ರದಲ್ಲಿಯೇ ಇದು ಅತ್ಯಧಿಕ ಸಂಖ್ಯೆಯದ್ದಾಗಿದೆ. ACS, E, IT, Bt ಮತ್ತು S&T ಮತ್ತು RDPR ರವರು ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ಸಭೆ ನಡೆಸಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಮಾಡಿಸುವುದು. | • ಕಾರ್ಯದರ್ಶಿ e-Governance.<br>• ಕಾರ್ಯದರ್ಶಿ ನಗರಾಭಿವೃಧ್ಧಿ ಇಲಾಖೆ ಮತ್ತು DMA.<br>• ACS, UDD, ಇಂದನ ಹಾಗು ಮುಖ್ಯ ಆಯುಕ್ತರು BBMP<br>• ACS, E, IT, Bt ಮತ್ತು S&T ಮತ್ತು ACS, RDPR ಇಲಾಖೆಗಳು. |
| **3** | ಕೇಂದ್ರದ ROW ನೀತಿಗೆ ತರಲಾದ ತಿದ್ದುಪಡಿಗಳನ್ನು UDD & RDPR ಇಲಾಖೆಗಳ ನೀತಿಗಳಲ್ಲಿ | ಭಾರತ ಸರ್ಕಾರದಿಂದ ಆಗಸ್ಟ 2022 ರಲ್ಲಿ ತಂದಿರುವ ROW ನಿಯಮಗಳ ತಿದ್ದುಪಡಿಯನ್ನು UDD ಮತ್ತು RDPR ಇಲಾಖೆಗಳ RoW ನೀತಿಗಳಲ್ಲಿ ಅಳವಡಿಸಿಕೊಳ್ಳಲು ಕೂಡಲೇ | • ACS RDPR ಮತ್ತು UDD |

| | | | |
|---|---|---|---|
| | ಅಳವಡಿಸುವ ಕುರಿತು | ಕ್ರಮವಹಿಸುವುದು.. | |
| 4 | 5G ಸೇವೆ ಒದಗಿಸಲು ಅನುವಾಗುವಂತೆ ರಾಜ್ಯದ ಕಟ್ಟಡ ನಿರ್ಮಾಣ ನೀತಿಗೆ (Building Bye Laws) ತಿದ್ದುಪಡಿಗಳನ್ನು ಅಳವಡಿಸುವ ಕುರಿತು. | ಭಾರತ ಸರ್ಕಾರದಿಂದ ಕಳಿಸಿರುವ ಕಟ್ಟಡ ನಿರ್ಮಾಣ ನಿಯಮಗಳ (Building Bye Laws) ತಿದ್ದುಪಡಿಗಳನ್ನು ರಾಜ್ಯದ ಕಟ್ಟಡ ನಿರ್ಮಾಣ ನೀತಿಗಳಲ್ಲಿ ಅಳವಡಿಸಿಕೊಳ್ಳಲು, ವಿಶೇಷವಾಗಿ ಬಹುಮಹಡಿ ಕಟ್ಟಡಗಳ ನಿರ್ಮಾಣದಲ್ಲಿ ಅಳವಡಿಸಲು UDD ಮತ್ತು PWD ಇಲಾಖೆಗಳು ಕ್ರಮವಹಿಸಬೇಕೆಂದು ಸೂಚಿಸಲಾಯಿತು. | ACS UDD ಮತ್ತು PWD ಇಲಾಖೆ, |
| 5 | 4G ಸ್ಯಾಚುರೇಷನ್ ಯೋಜನೆಗೆ ಕಂದಾಯ, ಅರಣ್ಯ ಮತ್ತು ಆರ್ ಡಿಪಿಆರ್ ಇಲಾಖೆಗಳು ನಿವೇಷನಗಳನ್ನು ಒದಗಿಸುವ ಕುರಿತು. | ರಾಜ್ಯದಲ್ಲಿ ದೂರಸಂಪರ್ಕ ನೆಟ್ ವರ್ಕ್ ಇಲ್ಲದ 1114 ಗ್ರಾಮಗಳ ಪೈಕಿ RJIL ನ 129 ಗ್ರಾಮಗಳು ಹಾಗು BSNL ಗೆ ವಹಿಸಿದ 985ಗ್ರಾಮಗಳಿಗೆ ನೆಟ್ ವರ್ಕ್ ಸಂಪರ್ಕ ಕಲ್ಪಿಸಲು 685 ಜಾಗಗಳಲ್ಲಿ ಟವರ್ ಗಳನ್ನು ನಿರ್ಮಿಸಲು ಯೋಜನೆಯಾಗಿದೆ. ಅದರಲ್ಲಿ BSNL ನಿಂದ ನಿರ್ಮಿತವಾಗುವ 576 ಟವರ್‌ಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ನಿವೇಷನ ಒದಗಿಸುವಂತೆ ಭಾರತ ಸರ್ಕಾರದ ಟೆಲಿಕಾಂ ಕಾರ್ಯದರ್ಶಿಗಳು ಕೋರಿರುರುತ್ತಾರೆ. ಸಂಬಂಧಿತ ಇಲಾಖೆಗಳು ಅಂದರೆ ಕಂದಾಯ, RDPR ಮತ್ತು ಅರಣ್ಯ ಇಲಾಖೆಗಳು ತಮ್ಮ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಈ ನಿವೇಶನಗಳನ್ನು ಗುರುತಿಸುವಾಗ ಬಿಎಸ್ ಎನ್ ಎಲ್ ಗೆ ಸಹಕಾರ ನೀಡಲು ನೋಡಲ್ ಅಧಿಕಾರಿಗಳನ್ನು ನೇಮಿಸಿ ಜಂಟಿ ಸರ್ವೆ ಮೂಲಕ ಸೂಕ್ತ ಜಾಗಗಳನ್ನು ಗುರುತಿಸಲು ಕ್ರಮವಹಿಸುವುದು. ಹಾಗೆಯೇ BSNL ನ ಮುಖ್ಯ ಪ್ರಭಂಧಕರು ತಿಳಿಸಿರುವ ಅರಣ್ಯ ಇಲಾಖೆಯ 61 ಜಾಗಗಳು, ಕಂದಾಯ ಇಲಾಖೆಯ 159 ಜಾಗಗಳು ಮತ್ತು RDPR ಇಲಾಖೆಯ 67 ಜಾಗಗಳನ್ನು BSNL ಗೆ ಕೂಡಲೇ ಒದಗಿಸಿಕೊಡಲು ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಲಾಯಿತು. | ACS ಅರಣ್ಯ, ACS-RDPR, ಕಾರ್ಯದರ್ಶಿ ಕಂದಾಯ ಇಲಾಖೆ ಮತ್ತು PCCF, ಆಯುಕ್ತರು ಪಂಚಾಯತ್ ರಾಜ್ ಮತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳು.<br><br>BSNL ಮತ್ತು ಸಂಬಂಧಿತ ಇಲಾಖೆಗಳೊಂದಿಗೆ co-ordinate ಮಾಡಲು DOT ರವರಿಗೆ ಸೂಚಿಸಿದೆ. |
| 6 | 5G ಸೇವೆ ಒದಗಿಸಲು ಸಾರ್ವಜನಿಕ ಸ್ವತ್ತುಗಳ ಬಳಕೆಗೆ (Use of Street furniture) ಅವಕಾಶ ಕಲ್ಪಿಸುವ ಕರ್ನಾಟಕ ರೈಟ್ ಆಫ್ ವೇ ನಿಯಮಗಳನ್ನು (ROW | ರಾಜ್ಯದಲ್ಲಿ 5ಜಿ ಸೇವೆಯನ್ನು ಒದಗಿಸಲು ಕಡಿಮೆ ಅಂತರದಲ್ಲಿ ಅಂದರೆ ಸರಾಸರಿ 500 ಮೀಟರಿಗೆ ಒಂದರಂತೆ ಸ್ಮಾಲ್ ಸೆಲ್ ಗಳನ್ನು ಅಳವಡಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಡುವ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳ ಕಟ್ಟಡಗಳು ಮತ್ತು | ACS, Electronics, IT, BT ಮತ್ತು S&T, ಇಲಾಖೆ |

| | | | |
|---|---|---|---|
| | Policy) ರೂಪಿಸುವ ಕುರಿತು. | ಸ್ವತ್ತುಗಳನ್ನು (Street Furniture) ಬಳಸಲು ಕೇಂದ್ರ ಸರ್ಕಾರವು ತಿಳಿಸಿದೆ. ಅದರಂತೆ RDPR ಮತ್ತು UDD ಇಲಾಖೆಗಳನ್ನು ಹೊರತುಪಡಿಸಿ ಇತರೆ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ತಮ್ಮ ಸ್ವತ್ತುಗಳನ್ನು ಬಳಸಲು TIP/TSP ಗಳಿಗೆ ಅನುಮತಿ ಕೊಡುವುದಕ್ಕೆ ಅವಕಾಶವಾಗುವಂತೆ ಹೊಸ ನೀತಿಯನ್ನು ರೂಪಿಸಬೇಕು. ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಬೇರೆ ಬೇರೆ ROW Policy ಗಳು ಇರುವುದರ ಬದಲು ಎಲ್ಲಾ ಇಲಾಖೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಅನ್ವಯವಾಗುವಂತೆ ಒಂದೇ ROW ನಿಯಮಗಳನ್ನು ರೂಪಿಸಿಕೊಂಡು ಬರಲು Electronics, IT, BT ಮತ್ತು S&T ಇಲಾಖೆಗೆ ಸೂಚಿಸಲಾಯಿತು. | |
| 7 | ಪ್ರಧಾನ ಮಂತ್ರಿಗಳ ಗತಿಶಕ್ತಿ ಪೋರ್ಟಲ್ ಗೆ ಸಾರ್ವಜನಿಕ ಸ್ವತ್ತುಗಳ (Street furniture) ವಿವರಗಳನ್ನು ತುಂಬಿಸುವ ಬಗ್ಗೆ. | ರಾಜ್ಯದಲ್ಲಿ ಸರ್ಕಾರಿ ಇಲಾಖೆಗಳು ಮತ್ತು ಸಾರ್ಜನಿಕ ಸಂಸ್ಥೇಗಳ ಒಡೆನದಲ್ಲಿರುವ ಸ್ವತ್ತುಗಳ (Street furniture) ಮಾಹಿತಿಯನ್ನು ಪ್ರಧಾನ ಮಂತ್ರಿಗಳ ಗತಿಶಕ್ತಿ ಪೋರ್ಟಲ್ ಗೆ ಅಪ್ ಲೋಡ್ ಮಾಡಿಸುವಲ್ಲಿ ಇಂದನ ಇಲಾಖೆಯು ವಿವರಗಳನ್ನು ಒದಗಿಸಿಲ್ಲ. ಕೂಡಲೇ ವಿದ್ಯುತ್ ಕಂಬಗಳ ಸಹಿತ ಎಲ್ಲಾ ವಿರಗಳನ್ನು ಇಂದನ ಇಲಾಖೆಯಿಂದ ಒದಗಿಸಿ ಪ್ರಧಾನ ಮಂತ್ರಿಗಳ ಗತಿಶಕ್ತಿ ಪೋರ್ಟಲ್ ಗೆ ಅಪ್ ಲೋಡ್ ಮಾಡಿಸಲು ಸೂಚಿಸಲಾಯಿತು. | ACS ಇಂದನ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು KPTCL, BESCOM ಮತ್ತು ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು. |
| 8 | ಮುಖ್ಯ ಕಾರ್ಯದರ್ಶಿಗಳ ಅನುಮತಿ ಮೇರೆಗೆ ಚರ್ಚಿಸುವ ಇತರೆ ವಿಷಯಗಳು. | • ರಾಜ್ಯದ ಸಾಗರ್ ಬ್ಲಾಕ್ ನಲ್ಲಿ ಪ್ರಾಯೋಗಿಕವಾಗಿ ತೆಗೆದುಕೊಂಡಿರುವ FTTH ಸ್ಯಾಚುರೇಶನ್ ಯೋಜನೆ ಕೆಳಗೆ ಶಾಲಾ ಕಟ್ಟಡಗಳು, ಅಂಗನವಾಡಿ, ಪಿಎಹೆಚ್ ಸಿ ಇತ್ಯಾದಿಗಳು ಟೆಲಿಕಾಂ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಬೇಕಾಗಿದ್ದು ಅದು ಇದುವರೆಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳಿಂದ ಸಲ್ಲಿಕೆಯಾಗಿಲ್ಲವೆಂದು ತಿಳಿಸಿದಾಗ ಈ ಯೋಜನೆ ಕೆಳಗೆ ಸಂಪರ್ಕ ಪಡೆಯುವ ಸರ್ಕಾರಿ | • ಕಾರ್ಯದರ್ಶಿ- ಇ-ಆಡಳಿತ (E-Governance) |

| | | | | |
|---|---|---|---|---|
| | | | ಸಂಸ್ಥೆಗಳು ಮಾಸಿಕ 800 ರೂಪಾಯಿಗಳನ್ನು ಪಾವತಿಸಬೇಕೆಂದು ಹೇಳಲಾಗಿದೆ. ಅದಕ್ಕೆ ಯಾರು ಮುಂದೆ ಬರುತ್ತಿಲ್ಲ ಎಂದು ಕಾರ್ಯದರ್ಶಿ ಇ-ಗವರ್ನೆನ್ಸ್ ತಿಳಿಸಿದರು. ಶುಲ್ಕ ಪಾವಾತಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಲು ಸೂಚಿಸಲಾಯಿತು.<br>• 5G ಸೇವೆಯನ್ನು ಆರೋಗ್ಯ, ಶಿಕ್ಷಣ, ಸ್ಮಾರ್ಟ್ ಸಿಟಿ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಮತ್ತು ಉದ್ಯಮ ಪಾಲುಗಾರಿಕೆಯಲ್ಲಿ ಬಳಕೆ ಆಗುವಂತೆ ಮಾಡಲು ರಾಜ್ಯ ಸರ್ಕಾರವು ಸಿಒಇ (ಸೆಂಟರ್ ಆಫ್ ಎಕ್ಸಲೆನ್ಸ್) ಏಜೆನ್ಸಿಯನ್ನು ಗುರುತಿಸಲು ಡಿಒಟಿ ಅಧಿಕಾರಿಗಳು ಕೋರಿದರು. ಈ ಬಗ್ಗೆ ಪೂರ್ಣ ವಿವರಗಳನ್ನು ಕಳಿಸಿಕೊಡಲುಐಟಿ ನಿರ್ದೇಶಕರು ತಿಳಿಸಿದರು<br>• ಸಿಒಎಇ ಪರವಾಗಿ ಮಾತನಾಡಿದ ಶ್ರೀ ಧನಂಜಯ್ ಗವಂಡೆ ರವರು ಬಿಬಿಎಂಪಿ, ಬೆಸ್ಕಾಂ ಮುಂತಾದ ಸಂಸ್ಥೆಯ ಅಧಿಕಾರಿಗಳು ಮುಂಗಡ ಮಾಹಿತಿ ನೀಡದೆ ಕೇಬಲ್ ಕತ್ತರಿಸುವುದನ್ನು ತಪ್ಪಿಸಲು ಹಾಗು ಬಿಬಿಎಂಪಿಯಲ್ಲಿರುವ 100 ಕೋಟಿಗೂ ಅಧಿಕ ಮೊತ್ತದ ಸೆಕ್ಯುರಿಟಿ ಡಿಪಾಸಿಟ್ ಹಣ ಹಿಂತಿರುಗಿಸುವ ಅಥವ ಹೊಂದಾಣಿಕೆ ಮಾಡಿಸುವ ಬಗ್ಗೆ ಕ್ರಮ ಆಗಬೇಕೆಂತಲೂ ಹಾಗು ಟವರ್ ಗಳಿಗೆ ಇಂಡಸ್ಟ್ರಿಯಲ್ | • Director, DoT ಕರ್ನಾಟಕ LSA, R-1<br>• ACS-UDD, ACS-RDPR ಮತ್ತು ಮುಖ್ಯ ಆಯುಕ್ತರು BBMP.<br>• ACS, PWD |

| | | | | |
|---|---|---|---|---|
| | | | ಟ್ಯಾರೀಫ್ ವಿಧಿಸುವ ಬಗ್ಗೆ ಕೋರಿಕೆ ಸಲ್ಲಿಸಿದಾಗ. ಸಂಬಂಧಪಟ್ಟ ಇಲಾಖೆ/ಸಂಸ್ಥೆಗಳು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.<br>• ಲೋಕೋಪಯೋಗಿ ಇಲಾಖೆಯ ಮಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಕೇಬಲ್ ಅಳವಡಿಕೆಗೆ ದುಬಾರಿ ಶುಲ್ಕ ವಿಧಿಸುತ್ತಿರುವ ಬಗ್ಗೆ ಗಮನ ಸೆಳೆದಾಗ ಏಕರೂಪದ ಶುಲ್ಕ ವಿಧಿಸುವ ವ್ಯವಸ್ಥೆ ಮಾಡುವಂತೆ ಎಸಿಎಸ್ ಪಿಡಬ್ಲ್ಯುಡಿ ರವರಿಗೆ ತಿಳಿಸಲಾಯಿತು.<br>• ಡಿಐಪಿಎ ಸಂಸ್ಥೆಯ ಕರ್ನಲ್ ಕಪಿಲ್ ಹಂಡ ರವರು ಮಾತನಾಡಿ ಅಸ್ತಿತ್ವದಲ್ಲಿರುವ ಟವರ್ ನೊಂದಣಿ ಕೆಲಸ ಸುಸೂತ್ರವಾಗಿ ನಡೆಯದೆ ಇರುವುದು ಮತ್ತು ಟವರ್ ನಿರ್ಮಾಣ ಮಾಡುವಾಗ ಕೆಲವರು ಬಂದು ಅಡಚಣೆ ಉಂಟುಮಾಡುತ್ತಿರುವ ವಿಚಾರವನ್ನು ಸಭೆಯ ಗಮನಕ್ಕೆ ತಂದರು. ದೂರಸಂಪರ್ಕವು ಮೂಲ ಸೌಕರ್ಯ ಯೋಜನೆಯಾಗಿದ್ದು ಅದರ ಕೆಲಸಗಳಿಗೆ ಅಡ್ಡಿಪಡಿಸುವವರ ವಿರುಧ್ಧ ಅಗತ್ಯ ಕ್ರಮ ಜರುಗಿಸಲು ಪೋಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಪತ್ರ ಬರೆಯುವಂತೆ ಹಾಗು ಟವರ್ ನೊಂದಣಿ ಕಾರ್ಯದಲ್ಲಿ ಆಗುತ್ತಿರುವ ಸಮಸ್ಯೆಗಳೇನೆಂಬುದನ್ನು ತಿಳಿದು ಸೂಕ್ತ ಪರಿಹಾರೋಪಾಯಗಳನ್ನು ರೂಪಿಸಲು ತಿಳಿಸಲಾಯಿತು. | • ACS-E, IT, Bt and S&T ACS, UDD ಮತ್ತು RDPR, ಮುಖ್ಯ ಆಯುಕ್ತರು BBMP, DMA ಮತ್ತು ಆಯುಕ್ತರು ಪಂಚಾಯತ್ ರಾಜ್<br><br>• ACS- RDPR, ಮತ್ತು ಆಯುಕ್ತರು ಪಂಚಾಯತ್ ರಾಜ್ |

| | | | |
|---|---|---|---|
| | | • ಹೈಕೋರ್ಟ್ ಆದೇಶವಿದ್ದರೂ ಪಿಡಿಒ ಗಳು ಅದನ್ನು ನಿರ್ಲಕ್ಷಿಸಿ 2016 ರಿಂದ ತೆರಿಗೆ ಪಾವತಿಸಬೇಕೆಂದು ನೋಟೀಸ್ ನೀಡಿ ಟವರ್ ಗಳಿಗೆ ಕೊಟ್ಟಿರುವ ವಿದ್ಯುತ್ ಸಂಪರ್ಕಗಳನ್ನು ಕಡಿತ ಗೊಳಿಸುತ್ತಿರುವ ವಿಚಾರವನ್ನು ಗಮನಕ್ಕೆ ತಂದಾಗ ಆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯತು. | |

**(ವಂದಿತಾ ಶರ್ಮಾ)**
ಸರ್ಕಾರದ ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ

## ಅನುಬಂಧ –I

| ಕ್ರಮ ಸಂಖ್ಯೆ | ಹೆಸರು | ಹುದ್ದೆ ಮತ್ತು ಇಲಾಖೆ |
|---|---|---|
| 1 | ಶ್ರೀಮತಿ. ವಂದಿತಾ ಶರ್ಮಾ, ಭಾ.ಆ.ಸೇ | ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ |
| 2 | ಡಾ. ಇ ವಿ ರಮಣ ರೆಡ್ಡಿ, ಭಾ.ಆ.ಸೇ | ಅಪರ ಮುಖ್ಯ ಕಾರ್ಯದರ್ಶಿಗಳು, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,ಕರ್ನಾಟಕ ಸರ್ಕಾರ |
| 4 | ಶ್ರೀ.ವಿ.ಪೊನ್ನುರಾಜ್, ಭಾ.ಆ.ಸೇ | ಸರ್ಕಾರದ ಕಾರ್ಯದರ್ಶಿ,. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ (ಇ-ಆಡಳಿತ) |
| 3 | ಶ್ರೀ. ವಿನಯ್ ಶರ್ಮಾ, IFS | ಪಿಸಿಸಿಎಫ್ (ಎಫ್‌ಸಿ), ಅರಣ್ಯ ಇಲಾಖೆ |
| 6 | ಶ್ರೀಮತಿ ಶುಭಾ ಕಲ್ಯಾಣ್, ಭಾ.ಆ.ಸೇ | ನಿರ್ದೇಶಕರು, ಇ-ಆಡಳಿತ, RDPR |
| 7 | ಕು. ಮಂಜುಶ್ರೀ ಎನ್, ಭಾ.ಆ.ಸೇ | ನಿರ್ದೇಶಕರು, DMA |
| 5 | ಶ್ರೀಮತಿ ಅಪರ್ಣಾ ಪಾವಟೆ | ಅಪರ ಕಾರ್ಯದರ್ಶಿ, ಇಂಧನ ಇಲಾಖೆ |
| 12 | ಶ್ರೀ ಎಂ ಮಂಜುನಾಥ್ | ಅಧೀನ ಕಾರ್ಯದರ್ಶಿ, ಅರಣ್ಯ ಇಲಾಖೆ |
| 8 | ಶ್ರೀ. ಜಿ ಆರ್ ರವಿ | ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL |
| 9 | ಶ್ರೀಮತಿ ತೃಪ್ತಿ ಸಕ್ಸೇನಾ | ಉಪ ನಿರ್ದೇಶಕರು, R1, DOT LSA ಕರ್ನಾಟಕ |
| 10 | ಶ್ರೀ. ರಾಕೇಶ್ ಕುಮಾರ್ | ಸಲಹೆಗಾರರು -R1, DOT LSA Karnataka |
| 11 | ಶ್ರೀ. ಎಸ್ ಶ್ರೀಧರ್ | ನಿರ್ದೇಶಕರು R1, DOT LSA ಕರ್ನಾಟಕ |
| 13 | ಶ್ರೀ. ಮಹಾಂತೇಶ ಬಿಳಗಿ, ಭಾ.ಆ.ಸೇ | ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ |
| 21 | ಶ್ರೀಮತಿ. ಮೀನಾ ನಾಗರಾಜ್ ಸಿ ಎನ್, ಭಾ.ಆ.ಸೇ | ನಿರ್ದೇಶಕರು, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಇಲಾಖೆ |
| 22 | ಶ್ರೀ. ಹೀರಾ ನಾಯ್ಕ್ | ಸಲಹೆಗಾರರು,ಕಿಟ್ಸ್ |
| 14 | ಶ್ರೀ. ಬಿ ಎನ್ ಗಿರೀಶ್ | ಅಪರ ನಿರ್ದೇಶಕರು, ಪಟ್ಟಣ ಪಂಚಾಯತ್, ಬಿಬಿಎಂಪಿ |
| 15 | ಶ್ರೀ. ವಸಂತ ಕುಮಾರ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಒ.ಎಫ್.ಸಿ ಬಿ.ಬಿ.ಎಂ.ಪಿ |
| 16 | ಶ್ರೀ. ಲಕ್ಷ್ಮೀಶ | ಎಕ್ಸಿಕ್ಯುಟಿವ್ ಇಂಜಿನಿಯರ್-ಒ.ಎಫ್.ಸಿ ಬಿ.ಬಿ.ಎಂ.ಪಿ |
| 17 | ಧನಹಯ್ ಗವಂಡಯ್, | ಮುಖ್ಯಸ್ಥರು ಮೂಲಸೌಕರ್ಯ ವಿಭಾಗ, COAI |
| 18 | ಶ್ರೀ. ಕಪಿಲ್ ಹಂಡಾ, | ಪ್ರಧಾನ ಸಲಹೆಗಾರ, DIPA |
| 19 | ಶ್ರೀ. ಮುಖೇಶ್ ಕುಮಾರ್, | ಸಲಹೆಗಾರರು , COAI |
| 20 | ಶ್ರೀ. ಹರ್ಪೀತ್ ಸಿಂಗ್ | DIPA |